ತಾರತಮ್ಯವನ್ನು ನಿರಾಕರಿಸುವ ಒಂದು ಸೈದ್ಧಾಂತಿಕ ನಿಲುವಿಗೆ, ಮನೋಧರ್ಮಕ್ಕೆ ನಾಂದಿ ಹಾಡಿದರು. 'ಇದನ್ನೇ ನಾನು ಕಾಲಧರ್ಮ ಅಂತ ಹೇಳುತ್ತಿರುವುದು' ಎಂದು ಪೈ ಅವರು ಎತ್ತಿದ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನವನ್ನು ಮಾಡಿದರು.

ನಂತರ ಮಾತು ನೆರೆಭಾಷೆಯಾದ ಮಲಯಾಳಂ ಸಿನಿಮಾಗಳ ಕುರಿತು ತಿರುಗಿತು. 'ನಮ್ಮ ಪಕ್ಕದ ರಾಜ್ಯ ಕೇರಳದಲ್ಲಿ ಅತ್ಯುತ್ತಮ ಸಿನಿಮಾಗಳು ಬರುತ್ತಿವೆ. ಕಮರ್ಷಿಯಲ್ ಸಿನಿಮಾಗಳೂ ತುಂಬ ಚೆನ್ನಾಗಿರುತ್ತವೆ. ಕನ್ನಡದಲ್ಲಿ ಯಾವ ಪರಿಸ್ಥಿತಿ ಇದೆ?' ಎಂಬ ಪೈ ಅವರ ಪ್ರಶ್ನೆಗೆ ಮುಖಾಮುಖಿಯಾದ ಗಿರೀಶರು, 'ಕೇರಳದ ಜನರಲ್ಲಿ ದೀರ್ಘ ಕಾಲದ ಸಾಮಾಜಿಕ ಚಳವಳಿಗಳಿಂದಾಗಿ ಒಂದು ರೀತಿಯ ಸಾಮಾಜಿಕ ಎಚ್ಚರ ಮೂಡಿಬಂದಿದೆ. ಹಾಗಾಗಿ ಕೇರಳದ ಯಾವ ಮೂಲೆಗೆ ಹೋದರೂ ಯಾವ ಸಾಹಿತಿ ಏನು ಬರೆದ? ಯಾವ ಭಾಷೆಯಲ್ಲಿ ಏನು ಬರುತ್ತಿದೆ ಎಂದು ಅಲ್ಲಿನ ಜನಕ್ಕೆ ಗೊತ್ತಿರುತ್ತದೆ' ಎಂದರು. ಸಿನಿಮಾವನ್ನೂ ಕಲೆಯಾಗಿ, ಸಾಮಾಜಿಕ ಚಳವಳಿಯ ಅಂಗವಾಗಿ ಗುರುತಿಸಿದ ಕೆಲವೇ ರಾಜ್ಯಗಳಲ್ಲಿ ಕೇರಳವೂ ಒಂದು. ಹಾಗಾಗಿಯೇ ನನ್ನ ಅನೇಕ ಕೇರಳೀಯ ಮಿತ್ರರಿಗೆ ವೈಕಂ ಅಷ್ಟೇ ಕೊರಿಯಾದ ಚಿತ್ರ ನಿರ್ದೇಶಕ ಕಿಮ್ ಕಿ ಡುಕ್ ಕೂಡಾ ಆಪ್ತ.

ಮಾತುಕತೆ ಪ್ರೇಕ್ಷಕವರ್ಗದ ಕಡೆ ಹೊರಳಿತು. 'ಸಾಹಿತ್ಯ ಇರಬಹುದು, ಸಿನಿಮಾ ಇರಬಹುದು. ಗಂಭೀರವಾದ ಪ್ರಯತ್ನಗಳಿಗೆ ಹೇಳಿಕೊಳ್ಳುವಂಥ ಪ್ರೇಕ್ಷಕವರ್ಗ ಈಗ ಇಲ್ಲ' ಎನ್ನುವುದು ಪೈ ಅವರ ಅನಿಸಿಕೆ. 'ಹೊಸ ಪ್ರತಿಭೆಗಳು ಬಂದಾಗ ಅವರಿಗೆ ಸಿಕ್ಕಬೇಕಾದ ಮನ್ನಣೆ ತಕ್ಷಣಕ್ಕೆ ಸಿಗುತ್ತಿಲ್ಲ. ನಿಧಾನಕ್ಕೆ ಸಿಗುತ್ತದೆ. ಒಳ್ಳೆಯ ಪ್ರಯತ್ನಗಳಿಗೆ ಪ್ರಚಾರದ ಕೊರತೆ ಇದೆ. ಅದರಲ್ಲಿಯೂ ಅಧಿಕಾರ ಕೇಂದ್ರದಿಂದ ದೂರವಿದ್ದರಂತೂ ಮೊದಲೇ ಸಿಗುವುದಿಲ್ಲ' ಎಂದು ಕಾಸರವಳ್ಳಿ ಅವರಿಗೂ ಅನಿಸಿದೆ. 'ಆದರೆ ಇಂದು ಪ್ರಚಾರದ ಭರಾಟೆಯೂ ಹಿಂದೆಂದಿಗಿಂತಲೂ ಹೆಚ್ಚಾಗಿದೆಯಲ್ಲವೇ?' ಎಂಬ ಪ್ರಶ್ನೆಗೆ, 'ಪ್ರಚಾರ ಯಾವುದಕ್ಕೆ ಸಿಗುತ್ತಿದೆ?' ಎಂದು ಮರುಪ್ರಶ್ನೆ ಇಟ್ಟು ಅವರು ನಕ್ಕರು. 'ಉಪಭೋಗ ಸಂಸ್ಕೃತಿಯನ್ನು ನಾವೀಗಾಗಲೇ ಒಪ್ಪಿಕೊಂಡುಬಿಟ್ಟಿದ್ದೇವೆ. ಆ ಸಂಸ್ಕೃತಿಯಲ್ಲಿ ಯಾವುದು ಚೆನ್ನಾಗಿ ಮಾರಾಟ ಆಗುತ್ತದೆಯೋ ಅದೇ ದೊಡ್ಡದು ಎನ್ನುವಂತಾಗುತ್ತದೆ. ಈಗ ಆಗುತ್ತಿರುವುದೂ ಅದೇ' ಎಂದು ಪ್ರಸ್ತುತ ಕಾಲಘಟ್ಟದ ಗುಣಧರ್ಮವನ್ನೂ ಉಲ್ಲೇಖಿಸಿದರು.

'ನಿರ್ದೇಶಕನಾದವನಿಗೆ ಬೇರೆ ಬೇರೆ ಸಾಹಿತ್ಯ ಕೃತಿಗಳನ್ನು ಓದುವುದು ಶ್ರೇಷ್ಠ ಸಿನಿಮಾಗಳನ್ನು ನೋಡುವುದು ಅತ್ಯಗತ್ಯ' ಎನ್ನುವುದು ಕಾಸರವಳ್ಳಿ ಅಭಿಮತ. 'ಓದು ನಮಗೆ ಬೇರೆ ಬೇರೆ ರೀತಿಯ ಹೊಳಹುಗಳನ್ನು ಕೊಡುತ್ತ ಹೋಗುತ್ತದೆ. ಒಂದು ವಸ್ತುವನ್ನು ಬೇರೆ ರೀತಿ ಪರಿಭಾವಿಸಲು ಸಾಧ್ಯವಾಗುತ್ತದೆ. ಹಾಗೆಯೇ ಬೇರೆಯವರ ಸಿನಿಮಾಗಳನ್ನು ನೋಡುವುದೂ ಅಗತ್ಯ. ನಾನಂತೂ ಮಾಸ್ಟರ್ಸ್ ಅಂತ ನಾವು ಗುರ್ತಿಸುತ್ತೇವಲ್ಲ, ಅವರ ಸಿನಿಮಾಗಳನ್ನು ಮತ್ತೆ ಮತ್ತೆ ನೋಡುತ್ತಿರುತ್ತೇನೆ. ನನಗೆ ಈವತ್ತು ಹಿಂದಿ, ತಮಿಳು, ಇರಾನ್‌ನಲ್ಲಿ ಯಾವ ಸಿನಿಮಾಗಳು ಬಂದವು ಎಂಬ ತಕ್ಷಣದ ಅರಿವು ಇರುವುದಿಲ್ಲ. ಆದರೆ ಮುಖ್ಯ ಸಿನಿಮಾ ಎಂದು ತಿಳಿದರೆ ನೋಡುತ್ತಿರುತ್ತೇನೆ' ಎನ್ನುವ ಅವರು, 'ಇದರಿಂದಲೇ ನನಗೆ ನೆಚ್ಚಿನ ನಿರ್ದೇಶಕ ಎಂಬುದಿಲ್ಲ. ನೆಚ್ಚಿನ ಸಿನಿಮಾಗಳಿವೆ' ಎನ್ನುತ್ತಾರೆ.

ಇದೇ ಚರ್ಚೆಯ ಮುಂದುವರಿಕೆಯಾಗಿ ಮತ್ತೆ ಮಾತು ಮರಳಿದ್ದು ಹೊಸ ಪೀಳಿಗೆಯ ಕಡೆಗೇ.

'ಪ್ರೊಫೆಷನಲ್ ಕೋರ್ಸ್‌ಗಳಿಗೇ ಇಂದು ಹೆಚ್ಚು ಯುವಕರು ಹೋಗುತ್ತಿದ್ದಾರೆ. ಫೈನ್ ಆರ್ಟ್ ತೆಗೆದುಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ' ಎಂದರು ಪೈ. 'ಆದರೆ ರಂಗಭೂಮಿ ಮತ್ತು